# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ: 1579

ಉತ್ತರಿಸಬೇಕಾದ ದಿನಾಂಕ: 18.03.2026

ಸದಸ್ಯರ ಹೆಸರು: ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು: ಕಂದಾಯ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
| --- | --- | --- |
| ಅ | ಸರ್ಕಾರ ಜಾರಿಗೆ ತಂದಿರುವ ಭೂ ಗ್ಯಾರೆಂಟಿ ಯೋಜನೆಯನ್ನು ವಿವರಿಸುವುದು; ಯೋಜನೆಯ ಉದ್ದೇಶವೇನು; | ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಂದ ಮಾಹಿತಿ ಪಡೆದು **ಅನುಬಂಧ-1** ರಲ್ಲಿ ಲಗತ್ತಿಸಿದೆ. |
| ಆ | ಭೂ ಗ್ಯಾರೆಂಟಿ ಯೋಜನೆಯಡಿ ಈವರೆಗೆ ಎಷ್ಟು ಜನರಿಗೆ ಹಕ್ಕುಪತ್ರ ನೀಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿರುವ ದಾಖಲೆರಹಿತ ಜನವಸತಿ ಪ್ರದೇಶಗಳನ್ನು ಕರ್ನಾಟಕ ಭೂ-ಕಂದಾಯ ಕಾಯ್ದೆ 1964ರ ಕಲಂ 94(ಡಿ) ಮತ್ತು ಕರ್ನಾಟಕ ಭೂಕಂದಾಯ ನಿಯಮಗಳು 1966ರ ನಿಯಮಗಳ ಅನ್ವಯ ಹಾಗೂ ಕರ್ನಾಟಕ ಭೂ-ಸುಧಾರಣಾ ಕಾಯ್ದೆ 196 1961ರ ಕಲಂ 38(ಎ) ಮತ್ತು ಕರ್ನಾಟಕ ಭೂ-ಸುಧಾರಣಾ ನಿಯಮಗಳು 1974ರ ನಿಯಮಗಳ ಅನ್ವಯ ಹೊಸದಾಗಿ ಕಂದಾಯ ಗ್ರಾಮ, ಉಪಕಂದಾಯ ಗ್ರಾಮಗಳನ್ನಾಗಿ ಅಧಿಸೂಚಿಸಿ, ಅವುಗಳಲ್ಲಿ (ಕಂದಾಯ ಗ್ರಾಮ/ಉಪ-ಕಂದಾಯ ಗ್ರಾಮಗಳಲ್ಲಿ) ವಾಸವಿರುವ ಅರ್ಹ ಫಲಾನುಭವಿಗಳಿಗೆ ಇವತ್ತಿನ ದಿನದವರೆವಿಗೂ ಒಟ್ಟು 338663 ಹಕ್ಕುಪತ್ರಗಳನ್ನು ನೀಡಲಾಗಿರುತ್ತದೆ (ಜಿಲ್ಲಾವಾರು ವಿವರ **ಅನುಬಂಧ-2** ರಲ್ಲಿ ನೀಡಲಾಗಿದೆ). |
| ಇ | ರಾಜ್ಯದಲ್ಲಿ ಒಟ್ಟು ಎಷ್ಟು ಕಂದಾಯ ಗ್ರಾಮಗಳಿವೆ; ಈ ಕಂದಾಯ ಗ್ರಾಮಗಳಲ್ಲಿರುವ ಜನಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಂದ ಮಾಹಿತಿ ಪಡೆದು **ಅನುಬಂಧ-3** ರಲ್ಲಿ ಲಗತ್ತಿಸಿದೆ. |
| ಈ | ಕಂದಾಯ ಗ್ರಾಮಗಳಲ್ಲಿ ವಾಸ ಮಾಡುವವರಿಗೆ ಹಕ್ಕುಪತ್ರ ವಿತರಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ; ಈವರೆಗೆ ಎಷ್ಟು ಕಂದಾಯ ಗ್ರಾಮಗಳಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ; ಎಷ್ಟು ಜನರಿಗೆ ಹಕ್ಕುಪತ್ರ ನೀಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ಹೊಸ ಕಂದಾಯ / ಉಪ-ಕಂದಾಯ ಗ್ರಾಮಗಳನ್ನಾಗಿ ಅಧಿಸೂಚಿಸಿರುವ ಗ್ರಾಮಗಳಲ್ಲಿ ವಾಸವಿರುವ ಅರ್ಹ ಫಲಾನುಭವಿಗಳಿಗೆ ನಿಯಮಾನುಸಾರ ಹಕ್ಕು ಪತ್ರಗಳನ್ನು ವಿತರಿಸುವ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ. ಪ್ರಸ್ತುತ ಇಲ್ಲಿಯವರೆಗೂ ಒಟ್ಟು 6,721 ದಾಖಲೆರಹಿತ ಗ್ರಾಮಗಳನ್ನು ಗುರುತಿಸಿದ್ದು, ಅವುಗಳಲ್ಲಿ ದಿನಾಂಕ 31-12-2025ರ ಅಂತ್ಯದವರೆವಿಗೂ |

Scanned with OKEN Scanner

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಉ | ರಾಜ್ಯದ ಎಲ್ಲಾ ಕಂದಾಯ ಗ್ರಾಮಗಳಲ್ಲಿ ಹಕ್ಕುಪತ್ರ ವಿತರಿಸುವ ಕಾರ್ಯ ಯಾವಾಗ ಪೂರ್ಣಗೊಳ್ಳಲಿದೆ; ಈ ಕಾರ್ಯ ಪೂರ್ಣಗೊಳಿಸಲು ಸರ್ಕಾರ ನೀಡಿರುವ ಸೂಚನೆ ಏನು; ಹಾಕಿಕೊಂಡಿರುವ ಕಾರ್ಯಕ್ರಮಗಳೇನು? (ವಿವರ ನೀಡುವುದು) | ಒಟ್ಟು 4,048 ಹೊಸ ಕಂದಾಯ / ಉಪ-ಕಂದಾಯ ಗ್ರಾಮಗಳನ್ನಾಗಿ ಅಂತಿಮ ಅಧಿಸೂಚನೆ ಹೊರಡಿಸಲಾಗಿರುತ್ತದೆ ಮತ್ತು ಒಟ್ಟು 3,38,663 ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ನೀಡಲಾಗಿರುತ್ತದೆ (ಜಿಲ್ಲಾವಾರು ವಿವರ **ಅನುಬಂಧ-2** ರಲ್ಲಿ ನೀಡಲಾಗಿದೆ)<br><br>ಮುಂದುವರೆದು, ಭಾರತ ಸರ್ಕಾರದ ಪತ್ರ No.01/06/2025-CEN(GEN) C.No.52827 ದಿನಾಂಕ:29-07-2025 ರಲ್ಲಿನ ನಿರ್ದೇಶನದಂತೆ ದಿನಾಂಕ:01-01-2026 ರಿಂದ 31-03-2027ರ ವರೆಗೆ ಯಾವುದೇ ಗ್ರಾಮಗಳ ಗಡಿಗಳನ್ನು ಬದಲಾವಣೆ ಮಾಡದಿರಲು ಅಥವಾ ಹೊಸಕಂದಾಯ / ಉಪ-ಕಂದಾಯ ಗ್ರಾಮಗಳನ್ನಾಗಿ ಅಂತಿಮ ಅಧಿಸೂಚನೆ ಹೊರಡಿಸದಂತೆ ಆದೇಶಿಸಿರುವುದರಿಂದ ಈಗ ಸಧ್ಯ ಯಾವುದೇ ಹೊಸ ಕಂದಾಯ ಗ್ರಾಮಗಳನ್ನಾಗಿ ಅಧಿಸೂಚನೆ ಹೊರಡಿಸುತ್ತಿಲ್ಲ. ಸದರಿ ಅವಧಿ (ದಿನಾಂಕ:01-01-2026 ರಿಂದ 31-3-2027) ಮುಗಿದ ನಂತರ ಜಿಲ್ಲಾಧಿಕಾರಿಗಳು ಸಲ್ಲಿಸಿದ/ ಸಲ್ಲಿಸುವ ಪ್ರಸ್ತಾವನೆಗಳ ಬಗ್ಗೆ ಪರಿಶೀಲಿಸಿ ನಿಯಾನುಸಾರ ಕ್ರಮ ಕೈಗೊಂಡು ಹೊಸ ಕಂದಾಯ / ಉಪ ಕಂದಾಯ ಗ್ರಾಮಗಳನ್ನಾಗಿ ಅಧಿಸೂಚನೆಗಳನ್ನು ಹೊರಡಿಸಿ ಮುಂದಿನ ಪ್ರಕ್ರಿಯೆಗಳನ್ನು ಜರುಗಿಸಲಾಗುವುದು. |

**ಕಂಇ 122 ಎಂಆರ್‌ಆರ್ 2026**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು



Scanned with OKEN Scanner

 ಚುಕ್ಕೆ ಗುರುತಿಲ್ಲದ ಪ್ರ.ಸಂ: 1579 ಕ್ಕೆ ಅನುಬಂಧ-1

## ಅನುಬಂಧ-1

## ಭೂ-ಗ್ಯಾರಂಟಿ ಯೋಜನೆಗಳು

- **ಭೂ-ಸುರಕ್ಷಾ ಯೋಜನೆ (ಕಂದಾಯ ದಾಖಲೆಗಳ ಗಣಕೀಕರಣ)**: ಸದರಿ ಯೋಜನೆಯಡಿಯಲ್ಲಿ ರಾಜ್ಯದ ಕಂದಾಯ ಕಛೇರಿಯಲ್ಲಿನ ಎಲ್ಲಾ ದಾಖಲೆಗಳನ್ನು ಡಿಜಿಟಲೀಕರಣ ಮಾಡಲು ಹಾಗೂ ಡಿಜಿಟಲ್ ದಾಖಲೆಗಳನ್ನು ಸಾರ್ವಜನಿಕರಿಗೆ ವಿತರಿಸಲು ಕ್ರಮವಹಿಸಲಾಗುತ್ತಿದೆ.

- **ಆರ್.ಸಿ.ಸಿ.ಎಂ.ಎಸ್ 2.0 (Revenue Court Case Monitoring System 2.0):** ಕಂದಾಯ ನ್ಯಾಯಾಲಯಗಳಾದ ತಹಸೀಲ್ದಾರ್ ನ್ಯಾಯಾಲಯ, ಉಪವಿಭಾಗಾಧಿಕಾರಿಗಳ ನ್ಯಾಯಾಲಯ ಹಾಗೂ ಜಿಲ್ಲಾಧಿಕಾರಿಗಳ ನ್ಯಾಯಾಲಯದ ಪ್ರಕ್ರಿಯೆಯನ್ನು RCCMS ತಂತ್ರಾಂಶದ ಮುಖಾತಂರ ಆನ್-ಲೈನ್ ನಲ್ಲಿಯೇ ನಿರ್ವಹಿಸಲಾಗುತ್ತಿದ್ದು, ಹಾಗೂ ಎಲ್ಲಾ ಆದೇಶಗಳನ್ನು ಡಿಜಿಟಲ್ ಸಹಿಯೊಂದಿಗೆ ನೀಡಲಾಗುತ್ತಿದೆ.

- **ಲ್ಯಾಂಡ್ ಬೀಟ್ ತಂತ್ರಾಂಶ**: ರಾಜ್ಯದಲ್ಲಿನ ಸರ್ಕಾರಿ ಜಮೀನುಗಳು ಅನಧಿಕೃತ ಒತ್ತುವರಿಯಾಗುವುದನ್ನು ತಪ್ಪಿಸಲು Land Beat ಮೊಬೈಲ್ ಆಪ್ ಅಭಿವೃದ್ಧಿಪಡಿಸಿದ್ದು, ಕಾರ್ಯನಿರ್ವಹಣೆಯಲ್ಲಿರುತ್ತದೆ.

- **ಆಧಾರ್ ಸೀಡಿಂಗ್ (ನನ್ನ ಆಸ್ತಿ):** ರೈತರ ಜಮೀನಿಗೆ ಸಂಭಂಧಿಸಿದಂತೆ ಯಾವುದೇ ಕಾನೂನುಬಾಹಿರ ವಹಿವಾಟುಗಲಾಗದಂತೆ ತಡೆಯುವ ಹಾಗೂ ಸಂಬಂಧಿಸಿದ ರೈತರಿಗೆ ನೇರವಾಗಿ ಸರ್ಕಾರಿ ಸೌಲಭ್ಯವನ್ನು ವಿತರಿಸಲು ಸುಲಭವಾಗುವ ನಿಟ್ಟಿನಲ್ಲಿ ಪಹಣಿಯೊಂದಿಗೆ ರೈತರ ಆಧಾರ್ ಸಂಖ್ಯೆಯನ್ನು ಜೋಡಣೆ ಮಾಡಲಾಗುತ್ತಿದೆ.

- **ಆಟೋ-ಮ್ಯುಟೇಷನ್**: ನೋಟೀಸು ರಹಿತ ಮ್ಯುಟೇಶನ್ ಗಳನ್ನು Manual Thumb Impression ಬದಲಿಗೆ Server Certificate ಮೂಲಕ ಅನುಮೋದನೆಗೊಳ್ಳುವಂತೆ (Auto Approval) ಭೂಮಿ ತಂತ್ರಾಂಶದಲ್ಲಿ ಅಗತ್ಯ ಮಾರ್ಪಾಡು ಮಾಡಲಾಗಿರುತ್ತದೆ. ರಾಜ್ಯದಲ್ಲಿ ವಿಲೇವಾರಿಯಾಗುವ ಒಟ್ಟಿಯ ಮ್ಯುಟೇಷನ್ ಗಳಲ್ಲಿ ಶಕಡಾ ೭೦ ರಷ್ಟು ಮುಟೇಷನ್ ಗಳನ್ನು ಆಟೋ-ಮ್ಯುಟೇಷನ್ ವ್ಯಾಪ್ತಿಯಡಿ ತರಲಾಗಿದೆ.

- **1-5 & 6-10 ಡಿಜಿಟಲೀಕರಣ (ನನ್ನ ಭೂಮಿ):** ಭೂ ಮಂಜೂರಾತಿ ಪ್ರಕರಣಗಳ ದರಖಾಸ್ತು ಪೋಡಿ ದುರಸ್ತಿ ಸಂಬಂಧ ನಮೂನೆ 1-5 & 6-10 ಪ್ರಕ್ರಿಯೆ ಸರಳೀಕರಣ ಮಾಡುವ ಕುರಿತು ಸರ್ಕಾರದ ಆದೇಶ ಸಂಖ್ಯೆ: ಕಂಇ 156 ಎಸ್ ಎಸ್ ಎಂ 2024, ದಿನಾಂಕ:25.11.2024 ರನ್ವಯ ಆದೇಶಿಸಲಾಗಿದ್ದು, ಅದರಂತೆ ಸದರಿ 1-5 & 6-10 ನಮೂನೆಗಳನ್ನು ಡಿಜಿಟಲೈಜ್ ಮಾಡಲು ತಂತ್ರಾಂಶ ಅಭಿವೃದ್ಧಿಪಡಿಸಿ ರಾಜ್ಯದೆಲ್ಲೆಡೆ ಅಳವಡಿಸಲಾಗಿರುತ್ತದೆ.

- **ಇ-ಪೌತಿ**: ಅರ್ಜಿದಾರರ ಇ-ಕೆವೈಸಿಯೊಂದಿಗೆ ತ್ವರಿತವಾಗಿ ಹಾಗೂ ಸುಲಭವಾಗಿ ಪೌತಿ ಮ್ಯುಟೇಶನ್ ಮಾಡಲು ಅನುಕೂಲವಾಗುವಂತೆ ಇ-ಪೌತಿ ಮೊಬೈಲ್ ಆಪ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ರಾಜ್ಯದೆಲ್ಲೆಡೆ ಅಳವಡಿಸಲಾಗಿರುತ್ತದೆ.

- **ಬಗ್ಗೈರ್‌ಹುಕುಂ ತಂತ್ರಾಂಶ**: ಅನಧಿಕೃತ ಸಾಗುವಳಿ ಸಕ್ರಮೀಕರಣ ಸಂಬಂಧ ನಮೂನೆ-50, 53 ಮತ್ತು 57 ರಡಿ ಸ್ವೀಕರಿಸಿರುವ ಅರ್ಜಿಗಳನ್ನು ತ್ವರಿತವಾಗಿ ಇತ್ಯರ್ಥಪಡಿಸುವ ಸಂಬಂಧ ಎಲ್ಲಾ ಪ್ರಕ್ರಿಯೆಗಳನ್ನು ಬಗ್ಗೈರ್ ಹುಕುಂ ತಂತ್ರಾಂಶದಲ್ಲಿಯೇ ನಿರ್ವಹಿಸಲು ಬಗ್ಗೈರ್ ಹುಕುಂ ((END to END) ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ.

- **ಇ-ಖಾವದಿ:** ಮ್ಯುಟೇಶನ್ ವಹಿವಾಟುಗಳಲ್ಲಿ ಪಾರದರ್ಶಕತೆ ಹೆಚ್ಚಿಸಲು ಮತ್ತು ನಿರ್ದಿಷ್ಟ ಭೂಮಿಯ ಮೇಲಿನ ವಹಿವಾಟುಗಳ ಬಗ್ಗೆ ರೈತರಿಗೆ ಮಾಹಿತಿ ನೀಡುವ ಉದ್ದೇಶದಿಂದ ಇ-ಖಾವದಿ

ಪೋರ್ಟಲ್ ಆರಂಭಿಸಲಾಗಿದ್ದು, ಇದೊಂದು ಸಾರ್ವಜನಿಕ ಪೋರ್ಟಲ್ ಆಗಿರುತ್ತದೆ. ಇಲ್ಲಿ ಗ್ರಾಮವಾರು ನಮೂನೆ 12 ಮತ್ತು 21 ತಿಳುವಳಿಕೆ ನೋಟಿಸ್ ಗಳು, RCCMS ಪ್ರಕರಣಗಳ ಮಾಹಿತಿ, ಭೂಪರಿವರ್ತನೆಯ ಕೋರಿಕೆಯ ಸ್ಥಿತಿ ಹಾಗೂ ಸರ್ಕಾರಿ ಜಮೀನಗಳ ಮಾಹಿತಿಯನ್ನು ವೀಕ್ಷಿಸಬಹುದು. (Portal link: https://rdservices.karnataka.gov.in/echawadi/ )

- **ಡಿಜಿಟಲ್ ಡ್ಯಾಶ್ ಬೋರ್ಡ್:** ಸಾರ್ವಜನಿಕರಿಗೆ ಜಮೀನಿನ ಸಂಬಂ ತ ಎಲ್ಲಾ ಅಗತ್ಯ ಮಾಹಿತಿ ಒದಗಿಸುವ ನಿಟ್ಟಿನಲ್ಲಿ ಸಾರ್ವಜನಿಕ ಪೋರ್ಟಲ್ ಅಭಿವೃದ್ಧಿಪಡಿಸಲಾಗಿದ್ದು, ಸದರಿ ಪೋರ್ಟಲ್ ನಲ್ಲಿ ರಾಜ್ಯದಲ್ಲಿನ ಪಹಣಿ ವಿವರ, ಮಾಲೀಕರ ವಿವರ, ಸರ್ಕಾರಿ ಜಮೀನಿನ ವಿವರ, ಮ್ಯುಟೇಶನ್ ವಿವರ ಒಳಗೊಂಡಂತೆ ಭೂಮಿ ಸಂಬಂಧಿತ ಎಲ್ಲಾ ಮಾಹಿತಿಯು ಗ್ರಾಮವಾರು ಲಭ್ಯವಿರುತ್ತದೆ. (Portal link : https://rdreports.karnataka.gov.in/ )

- **ಪರಿಹಾರ 2.0**: ನೈಸರ್ಗಿಕ ವಿಕೋಪಗಳಿಂದ ತತ್ತರಿಸಿದ ರೈತರಿಗೆ ಕ್ಷಿಪ್ರ, ಪಾರದರ್ಶಕ ಮತ್ತು ನಿಖರವಾದ ಪರಿಹಾರವನ್ನು ನೀಡುವ ನಿಟ್ಟಿನಲ್ಲಿ ಪರಿಹಾರ ತಂತ್ರಾಂಶವನ್ನು ಉನ್ನತೀಕರಿಸಲಾಗಿದ್ದು, ಪರಿಹಾರ 2.0 ತಂತ್ರಾಂಶದಲ್ಲಿ ಉಪಗ್ರಹ ಆಧಾರಿತ ಬೆಳೆ ಹಾನಿ ದತ್ತಾಂಶ, ಆಧಾರ್ ಜೋಡಿತ ಭೂ ದಾಖಲೆಗಳು (BHOOMI) ಮತ್ತು ಬೆಳೆ ಮಾಹಿತಿಯನ್ನು (Crop Survey) ಸಂಯೋಜಿಸಿ, ನಿಜವಾದ ಸಂತ್ರಸ್ತರನ್ನು ಗುರುತಿಸಿ ಯಾವುದೇ ಮಧ್ಯವರ್ತಿಗಳಿಲ್ಲದೆ ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ಪರಿಹಾರ ಜಮಾವಣೆ ಮಾಡಲಾಗುತ್ತಿದೆ.

- **ಕಂದಾಯ ಗ್ರಾಮ:** ದಾಖಲೆರಹಿತ ಜನವಸತಿಗಳಾದ ತಾಂಡ, ಹಟ್ಟಿ, ಹಾಡಿ, ದೊಡ್ಡಿ, ಪಾಳ್ಯ, ಮಜರೆ, ಕ್ಯಾಂಪ್, ಕಾಲೋನಿ ಇತ್ಯಾದಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳು ಸರ್ಕಾರಿ ಸೌಲಭ್ಯ ಪಡೆಯಲು ಅನುವಾಗುವಂತೆ ಇಂತಹ ಗ್ರಾಮಗಳನ್ನು ಗುರುತಿಸಿ, ಕಂದಾಯ ಗ್ರಾಮಗಳಾಗಿ ಘೋಷಿಸಲಾಗುತ್ತಿದೆ. ದೇಶದಲ್ಲಿಯೇ ಮೊದಲಬಾರಿಗೆ ಕಂದಾಯ, ಗ್ರಾಮೀಣಾಭಿವೃದ್ಧಿ ಹಾಗೂ ಮುದ್ರಾಂಕ ಇಲಾಖೆಯ ತಂತ್ರಾಂಶವನ್ನು ಸಂಯೋಜಿಸಿ ಹಕ್ಕುಪತ್ರವನ್ನು ನೋಂದಾಯಿಸಿ ಈ-ಸ್ವತ್ತು (ಇ-ಖಾತಾ) ದಾಖಲಾತಿಯೊಂದಿಗೆ ಫಲಾನುಭವಿಗೆ ನೀಡಲಾಗುತ್ತಿದೆ.

- **IMP Automation:** ಮ್ಯುಟೇಶನ್ ಮತ್ತು ಪೋಡಿಯನ್ನು ತ್ವರಿತವಾಗಿ ಮಾಡಲು ಅವಕಾಶವಾಗುವಂತೆ ಸಂಯೋಜಿತ ಮ್ಯುಟೇಶನ್ ಪೋಡಿ (IMP) ಪ್ರಕ್ರಿಯೆಯನ್ನು ಆಟೋಮೇಶನ್ ಮಾಡಲಾಗಿರುತ್ತದೆ. ಸದರಿ ಹೊಸ ಸಂಯೋಜಿತ ಮ್ಯುಟೇಶನ್ ಪೋಡಿ ಆಟೋಮೇಶನ್ ಪ್ರಕ್ರಿಯೆಯಲ್ಲಿ ಭೂಮಿ ತಂತ್ರಾಂಶಕ್ಕೆ ಸ್ವೀಕೃತವಾಗುವ ವಹಿವಾಟುಗಳು ರಾಜಸ್ವ ನಿರೀಕ್ಷಕರ ಲಾಗಿನ್ ನ ಸರಳ ಮ್ಯುಟೇಶನ್ ವಿಧಾನದಲ್ಲಿ ಅನುಮೋದಿಸಲ್ಪಟ್ಟು, ಪಹಣಿಯಲ್ಲಿ ಹೊಸ ಖಾತೆದಾರರ ಹೆಸರು ದಾಖಲಾಗುತ್ತದೆ ಹಾಗೂ ತದನಂತರ ಫಾರ್ಮ್ 10 ಸೃಜಿಸಲು 11ಇ ನಕ್ಷೆಯನ್ನು ಮೋಜಿಣಿಗೆ ಕಳುಹಿಸಲಾಗುವುದು ಹಾಗೂ ಆಕಾರ್ ಬಂದ್ ಸ್ವಯಂಚಾಲಿತವಾಗಿ ಅಪ್ಡೇಟ್ ಮಾಡಲಾಗುವುದು. ಅಂತಿಮವಾಗಿ ಸಂಬಂಧಿಸಿದ ಭೂದಾಖಲೆಗಳ ಸಹಾಯಕ ನಿರ್ದೇಶಕರ ಲಾಗಿನ್ ನಲ್ಲಿ ಫಾರ್ಮ್ 10 ಅನುಮೋದನೆಯ ನಂತರ ಭೂಮಿಗೆ ಕಳುಹಿಸಿ, ನೇರವಾಗಿ ಪೋಡಿ ಮ್ಯುಟೇಶನ್ ಮೂಲಕ ಪಹಣಿ ಸೃಜಿಸಲಾಗುತ್ತದೆ.

 ಚುಕ್ಕೆ ಗುರುತಿಲ್ಲದ ಪ್ರ.ಸಂ: 1579 ಕ್ಕೆ ಅನುಬಂಧ-2

# ಅನುಬಂಧ

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಗುರುತಿಸಿರುವ ದಾಖಲೆರಹಿತ ಗ್ರಾಮಗಳ ಸಂಖ್ಯೆ | ಪ್ರಾಥಮಿಕ ಅಧಿಸೂಚನೆ ಹೊರಡಿಸಿರವ ಕಂದಾಯ ಗ್ರಾಮಗಳ ಸಂಖ್ಯೆ | ಅಂತಿಮ ಅಧಿಸೂಚನೆ ಹೊರಡಿಸಿರವ ಕಂದಾಯ ಗ್ರಾಮಗಳ ಸಂಖ್ಯೆ | ಅರ್ಹ ಫಲಾನುಭವಿಗಳಿಗೆ ವಿತರಿಸಿದ ಹಕ್ಕುಪತ್ರಗಳ ಸಂಖ್ಯೆ |
|---|---|---|---|---|---|
| 1 | ಬೆಂಗಳೂರು ನಗರ | 29 | 29 | 29 | 660 |
| 2 | ಬೆಂಗಳೂರು ಗ್ರಾಮಾಂತರ | 209 | 61 | 55 | 7546 |
| 3 | ಚಿಕ್ಕಬಳ್ಳಾಪುರ | 456 | 285 | 277 | 3969 |
| 4 | ಚಿತ್ರದುರ್ಗ | 398 | 390 | 310 | 23815 |
| 5 | ದಾವಣಗೆರೆ | 289 | 199 | 147 | 16217 |
| 6 | ಕೋಲಾರ | 197 | 77 | 64 | 2965 |
| 7 | ಶಿವಮೊಗ್ಗ | 80 | 62 | 59 | 3922 |
| 8 | ತುಮಕೂರು | 1107 | 911 | 847 | 31313 |
| 9 | ರಾಮನಗರ | 467 | 182 | 150 | 11307 |
| 10 | ಮೈಸೂರು | 191 | 124 | 113 | 7225 |
| 11 | ಚಾಮರಾಜನಗರ | 116 | 67 | 51 | 476 |
| 12 | ಚಿಕ್ಕಮಗಳೂರು | 440 | 213 | 203 | 9676 |
| 13 | ದಕ್ಷಿಣ ಕನ್ನಡ | 0 | 0 | 0 | 0 |
| 14 | ಹಾಸನ | 60 | 49 | 42 | 2703 |
| 15 | ಕೊಡಗು | 0 | 0 | 0 | 0 |
| 16 | ಮಂಡ್ಯ | 215 | 149 | 123 | 7294 |
| 17 | ಉಡುಪಿ | 0 | 0 | 0 | 0 |
| 18 | ಬೆಳಗಾವಿ | 221 | 148 | 138 | 19382 |
| 19 | ವಿಜಯಪುರ | 286 | 223 | 193 | 32175 |
| 20 | ಬಾಗಲಕೋಟೆ | 51 | 36 | 33 | 6109 |
| 21 | ಧಾರವಾಡ | 65 | 65 | 64 | 7357 |
| 22 | ಗದಗ | 36 | 36 | 36 | 4083 |
| 23 | ಹಾವೇರಿ | 393 | 342 | 241 | 29906 |
| 24 | ಉತ್ತರ ಕನ್ನಡ | 20 | 16 | 16 | 1366 |
| 25 | ಕಲಬುರ್ಗಿ | 365 | 347 | 330 | 28308 |
| 26 | ಬೀದರ್ | 223 | 74 | 60 | 7435 |
| 27 | ಬಳ್ಳಾರಿ | 102 | 71 | 69 | 10887 |
| 28 | ರಾಯಚೂರು | 121 | 69 | 53 | 8313 |
| 29 | ಕೊಪ್ಪಳ | 82 | 72 | 51 | 9329 |
| 30 | ಯಾದಗಿರಿ | 144 | 96 | 95 | 12671 |
| 31 | ವಿಜಯನಗರ | 358 | 242 | 199 | 32254 |
| | **ಒಟ್ಟು** | **6721** | **4635** | **4048** | **338663** |

ಚುಕ್ಕೆ ಗುರುತಿಲ್ಲದ ಪ್ರ.ಸಂ: 1579 ಕ್ಕೆ ಅನುಬಂಧ-3

## ಶ್ರೀ ಸಿ.ಟಿ ರವಿ ರವರ ಪ್ರಶ್ನೆ ಸಂಖ್ಯೆ:1482 (1579)

ಇ) ರಾಜ್ಯದಲ್ಲಿ ಎಷ್ಟು ಕಂದಾಯ ಗ್ರಾಮಗಳಿವೆ; ಈ ಕಂದಾಯ ಗ್ರಾಮಗಳಲ್ಲಿರುವ ಜನಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

### ಅನುಬಂಧ-3

| ಕ್ರ ಸಂ | ಜಿಲ್ಲೆ | ಒಟ್ಟು ಕಂದಾಯ ಗ್ರಾಮಗಳ ಸಂಖ್ಯೆ | ಈ ಕಂದಾಯ ಗ್ರಾಮಗಳಲ್ಲಿರುವ ಒಟ್ಟು ಜನಸಂಖ್ಯೆ |
|---|---|---|---|
| 1 | ಬೆಂಗಳೂರು ನಗರ | 872 | 9621551 |
| 2 | ಬೆಂಗಳೂರು ಗ್ರಾಮಾಂತರ | 1051 | 990923 |
| 3 | ಬೆಂಗಳೂರು ದಕ್ಷಿಣ | 839 | 1082636 |
| 4 | ಕೋಲಾರ | 1797 | 1140834 |
| 5 | ಚಿತ್ರದುರ್ಗ | 500 | 118200 |
| 6 | ದಾವಣಗೆರೆ | 910 | 1052235 |
| 7 | ಚಿಕ್ಕಬಳ್ಳಾಪುರ | 1522 | 1420298 |
| 8 | ತುಮಕೂರು | 2734 | 2300477 |
| 9 | ಶಿವಮೊಗ್ಗ | 1631 | 1752753 |
| 10 | ಕಲಬುರಗಿ | 965 | 1793851 |
| 11 | ಬೀದರ್ | 642 | 1349501 |
| 12 | ಬಳ್ಳಾರಿ | 296 | 1615020 |
| 13 | ಕೊಪ್ಪಳ | 595 | 204995 |
| 14 | ರಾಯಚೂರು | 891 | 1928812 |
| 15 | ವಿಜಯನಗರ | 336 | 1690089 |
| 16 | ಯಾದಗಿರಿ | 581 | 953594 |
| 17 | ಉತ್ತರ ಕನ್ನಡ | 1289 | 1553503 |
| 18 | ಬೆಳಗಾವಿ | 1189 | 3873570 |
| 19 | ವಿಜಯಪುರ | 293 | 129480 |
| 20 | ಬಾಗಲಕೋಟೆ | 624 | 1889752 |
| 21 | ಧಾರವಾಡ | 420 | 1542897 |
| 22 | ಗದಗ | 383 | 685261 |
| 23 | ಹಾವೇರಿ | 696 | 1597668 |
| 24 | ಚಾಮರಾಜನಗರ | 458 | 1020791 |
| 25 | ಮಂಡ್ಯ | 1485 | 1601347 |
| 26 | ಕೊಡಗು | 534 | 5,54,519 |
| 27 | ಹಾಸನ | 2581 | 1856012 |
| 28 | ಚಿಕ್ಕಮಗಳೂರು | 1140 | 1137944 |
| 29 | ದಕ್ಷಿಣ ಕನ್ನಡ | 422 | 2089648 |
| 30 | ಉಡುಪಿ | 267 | 1177361 |
| 31 | ಮೈಸೂರು | 1380 | 1538862 |